# ಬಣ್ಣ ಹಚ್ಚಿದ್ದನ್ನು ನೋಡದ ತಂದೆ



## ಭರತ್ ಬೋಪಣ್ಣ

ಕಲರ್ಸ್ ಸೂಪರ್ 'ಗಿರಿಜಾ ಕಲ್ಯಾಣ'ದ ರಾಜವರ್ಧನ

★ *ನಿಮ್ಮ ಕಥೆಗೆ ಹರಿಹರನ 'ಗಿರಿಜಾ ಕಲ್ಯಾಣದ'ದ ನಂಟಿದೆಯಾ?*

ಇದು ಕಾಲ್ಪನಿಕ ಕಥೆ. ಕಾವ್ಯ ಅಥವಾ ಪುರಾಣದಿಂದ ಕಥೆ ಪ್ರಭಾವಿತ ಆಗಿರಲೂಬಹುದು. ಇಲ್ಲಿ ಅಮರದೇವನ ರಾಕ್ಷಸ ನಡತೆಗೆ ಕೊನೆ ಹಾಡಲು ಗಿರಿಜೆ ಶ್ರಮಿಸುತ್ತಾಳೆ. ಆಕೆ ಲೋಕಕಲ್ಯಾಣಾರ್ಥ ಶಿವ ಪೂಜೆಯನ್ನು ಕೈಗೊಳ್ಳುತ್ತಾಳೆ. ಅವನ ರಾಜ್ಯದಲ್ಲಿ ಶಿವನ ಆರಾಧನೆಗೆ ನಿಷೇಧ ಹೇರಲಾಗಿರುತ್ತದೆ. ನನ್ನ ಬಾಲ್ಯದಲ್ಲಿ ನಾನೂ ಶಿವಾರಾಧನೆಗೆ ಪಾಶಸ್ತ್ಯ ಕೊಟ್ಟಿರುತ್ತೇನೆ. ಆಕೆಯನ್ನು ಕಂಡ ಕ್ಷಣ ಬಾಲ್ಯ ನೆನಪಾಗುತ್ತದೆ. ಅದು ನನ್ನಲ್ಲಿ ಪ್ರೇಮಾಂಕುರದ ಬೀಜ ಮೊಳಕೆಯೊಡೆಯಲು ಕಾರಣವಾಗುತ್ತದೆ. ಆಕೆ ಇಷ್ಟವಾಗ್ತಾಳೆ. ಆಕೆಯನ್ನು ಪ್ರೇಮಿಸಿ ಮದುವೆಯಾಗುವ ಕಥನವನ್ನು ನಿರೂಪಿಸಲಾಗಿದೆ. ಕಥೆಯ ಒಟ್ಟಾರೆ ಆಶಯ ಸಾಮಾಜಿಕವಾಗಿದ್ದರೂ ಪೌರಾಣಿಕ ಪ್ರಭಾವವೂ ಇದ್ದೇ ಇದೆ.

★ *ನಟರಾಗಿದ್ದು ಹೇಗೆ?*

ಎರಡು ವರ್ಷಗಳಿಂದ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದೆ. ನನಗೆ ನಟನೆಯ ಬಯಕೆ ಇದ್ದೇ ಇತ್ತು. ನನ್ನ ಬಯಕೆಗೆ ಪೋಷಕರೂ ಸೇರಿದಂತೆ ಸ್ನೇಹಿತರು ಸದಾ ನೀರೆರೆಯುತ್ತಿದ್ದರು. ಒಮ್ಮೆ ನನ್ನ ಕಚೇರಿಯ ಮ್ಯಾನೇಜರ್ ಫೇಸ್‌ಬುಕ್‌ನಲ್ಲಿ ಆಡಿಷನ್ ಇರುವ ಬಗ್ಗೆ ಪ್ರಕಟಣೆ ತೋರಿಸಿ ಕಳುಹಿಸಿಕೊಟ್ಟರು. ಆಡಿಷನ್‌ನಲ್ಲಿ ಆಯ್ಕೆ ಆದೆ. ಇದಕ್ಕಿಂತ ಮುಂಚೆ ಮಾಡೆಲಿಂಗ್ ಕೂಡ ಮಾಡುತ್ತಿದ್ದೆ. ಆಗ ನನಗೆ ನಟನೆಯ ಕೆಲ ಭಂಗಿಗಳು ಪರಿಚಯವಾಗಿದ್ದವು. ವಿದ್ಯಾರ್ಥಿಯಾಗಿದ್ದಾಗ ನೃತ್ಯ ತಂಡವೊಂದರ ಸದಸ್ಯನಾಗಿದ್ದೆ. ಆಗಾಗ ಕಾರ್ಯಕ್ರಮಗಳನ್ನು ನೀಡುತ್ತಿದ್ದೆವು. ಇವೆಲ್ಲವನ್ನೂ ಕೂಡಿದ ಒಟ್ಟು ಮೊತ್ತ ನಟನನ್ನಾಗಿ ಮಾಡಿತು.

★ *ಹಲವು ಅಭಿರುಚಿಗಳಿರುವ ನಿಮಗೆ ಏಕೆ ತಂತ್ರಜ್ಞನೂ ಆಗಬಾರದು ಎಂದು ಅನ್ನಿಸಿಲ್ಲವೇ?*

ತಂತ್ರಜ್ಞ ಆಗಲಾರೆ. ಆದರೆ ತಾಂತ್ರಿಕ ಕ್ರಿಯೆಗಳನ್ನು ಖಂಡಿತಾ ಕಲಿಯುತ್ತೇನೆ. ನಾನೂ ಒಬ್ಬ ಪರಿಪಕ್ವ ನಿರ್ದೇಶಕ ಆಗಬೇಕು ಎನ್ನುವ ಆಶೆಯನ್ನು ಹೊತ್ತಿದ್ದೇನೆ. ಕ್ಯಾಮೆರಾ ನನ್ನ ಆಸಕ್ತಿಗಳಲ್ಲಿ ಒಂದು. ಅದನ್ನೂ ಕಲಿಯುತ್ತೇನೆ. ಅವೆಲ್ಲಾ ಹವ್ಯಾಸಗಳನ್ನಾಗಿಯೇ ನೋಡುತ್ತೇನೆ. ವೃತ್ತಿ ಎಂದರೆ ನಟನೆ ಮಾತ್ರ. ವಿವಿಧ ಪಾತ್ರಗಳಿಗೆ ಜೀವ ತುಂಬುವುದು ಬಾಕಿ ಇದೆ. ಇದು ನನ್ನ ಮೊದಲ ಹೆಜ್ಜೆ. ಕಾಲಕ್ರಮೇಣ ಸಿನಿಮಾಗಳಲ್ಲಿಯೂ ನಟಿಸುತ್ತೇನೆ.

★ *ರಾಜವರ್ಧನನ ಪಾತ್ರ ಹೇಗೆನಿಸುತ್ತದೆ?*

ಸೂರ್ಯ ವಂಶದ ರಾಜ. ಅವನ ಘನತೆಗೆ ತಕ್ಕ ಗತ್ತು, ಗಾಂಭೀರ್ಯ ತುಂಬಾ ಚೆನ್ನಾಗಿರುತ್ತದೆ. ರಾಜನಾದರೇನಂತೆ ಮನುಷ್ಯನೇ ತಾನೆ? ತನ್ನ ಪ್ರೇಯಸಿ ಜೊತೆ ತುಂಟಾಟ ಮಾಡುತ್ತಾನೆ. ಉಳಿದಂತೆ ರಾಜ ಗಾಂಭೀರ್ಯ ತೋರುತ್ತಾನೆ. ಹೀಗೆ ವ್ಯಕ್ತಿಯ ಬೇರೆ ಬೇರೆ ಮುಖಗಳಿಗೆ ಒಗ್ಗುವುದು, ನಟನೆಗೆ ಮೆರುಗು ತುಂಬುವುದು ಸವಾಲಿನ ಕೆಲಸ. ಅದನ್ನು ಅನುಭವಿಸುತ್ತಿದ್ದೇನೆ.

★ *ಬಾಲ್ಯದ ದಿನಗಳು ಹೇಗಿದ್ದವು?*

ಅಮ್ಮ ಕಾವೇರಮ್ಮ ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೆಲಸದಲ್ಲಿದ್ದರು. ಅಪ್ಪ ಕುಶಾಲಪ್ಪ ನ್ಯಾಯಾಲಯದ ಡಾಕ್ಯುಮೆಂಟ್ಸ್ ಬರೆಯುತ್ತಿದ್ದರು. ಮಡಿಕೇರಿಯಲ್ಲಿ ನಾಲ್ಕನೇ ತರಗತಿ ಓದಿದೆ. ಅಷ್ಟರಲ್ಲಿ ಅಮ್ಮನಿಗೆ ಬಂಟ್ವಾಳಕ್ಕೆ ವರ್ಗವಾಯಿತು. ಅಲ್ಲೇ ಎರಡು ಶಾಲೆಗಳಲ್ಲಿ ಓದಿದೆ. 8ನೇ ತರಗತಿಯಲ್ಲಿದ್ದಾಗ ನಾನು ವಾಲಿಬಾಲ್ ಆಟಗಾರನಾಗಿ ಗುರುತಿಸಿಕೊಂಡಿದ್ದೆ. ಮತ್ತೊಂದು ಶಾಲೆಯ ತಂಡದಲ್ಲಿ ಆಡುವ ಆಶೆಗೆ ಶಾಲೆಯನ್ನು ಬದಲಾಯಿಸಿದ್ದೆ. ನನಗೆ ಕ್ರೀಡೆ ತುಂಬಾ ಆಸಕ್ತಿಯ ಕ್ಷೇತ್ರ.

★ *ಕ್ರೀಡೆಯನ್ನು ಮಿಸ್ ಮಾಡಿಕೊಂಡಿದ್ದಕ್ಕೆ ಬೇಸರ ಎನಿಸುತ್ತಿದೆಯಾ?*

ಬಿಡುವು ಸಿಕ್ಕಾಗ ಈಗಲೂ ವಾಲಿಬಾಲ್, ಶಟಲ್ ಆಡುತ್ತೇನೆ. ನನಗೆ ಫಿಟ್ನೆಸ್ ಬಗ್ಗೆ ತುಂಬಾ ಕಾಳಜಿ. ಜಿಮ್‌ನಲ್ಲಿ ವರ್ಕ್‌ಔಟ್ ಮಾಡುವುದು ತುಂಬಾ ಖುಷಿ ಕೊಡುತ್ತದೆ. ನಟನಾಗಬೇಕು ಎನ್ನುವ ಆಶೆ ಫಲಿಸಿದೆ. ಬೇರೆ ಇನ್ನೇನೋ ಕಳೆದುಕೊಂಡಿದ್ದೇನೆ ಅಂತ ಅನ್ನಿಸಿಲ್ಲ. ತುಂಬಾ ನೋವಿನ ಸಂಗತಿ ಎಂದರೆ ತಂದೆಯನ್ನು ಕಳೆದುಕೊಂಡಿದ್ದು. ನನ್ನ ಹುರಿದುಂಬಿಸುತ್ತಿದ್ದ ಗೆಳೆಯನಂತಹ ತಂದೆ ಸ್ವತಃ ತಾವೇ ನನ್ನ ಜೊತೆ ಆಡಿಷನ್‌ಗೆ ಬಂದರು. ಅದಾಗಿ ಒಂದೆರಡು ದಿನಗಳಲ್ಲಿ ಹೃದಯಾಘಾತಕ್ಕೆ ತುತ್ತಾದರು. ಅಷ್ಟರಲ್ಲಿ ಪಾತ್ರಕ್ಕೆ ನನ್ನನ್ನು ಆಯ್ಕೆ ಮಾಡಿದ್ದರು. ಟಿವಿಯಿಂದ ಫೋನ್ ಬರತೊಡಗಿದವು. ಕರ್ಮಾಚರಣೆಯ ಕಾರ್ಯಗಳ ಕಾರಣದಿಂದ ಸ್ವಲ್ಪ ತಡವಾಗಿ ಬಂದು ಬಣ್ಣ ಹಚ್ಚಿದೆ. ಆದರೆ ಅದನ್ನು ಒಂದು ಕ್ಷಣವೂ ನನ್ನ ತಂದೆ ನೋಡಲಿಲ್ಲ ಎನ್ನುವ ಕೊರಗು ಇದ್ದೇ ಇದೆ.

■ ರಾಗು